# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ: 176/2015 ಸಿಡಬ್ಲೂ: 14 ಪಿಡಬ್ಲೂ: 10

ಪ್ರಮಾಣವಚನ ಬೋಧಿಸಲಾಯಿತು ದಿ: 30-07-2025

ಹೆಸರು : ಶರಪೊದ್ದೀನ್

ತಂದೆ ಹೆಸರು : ರುಕ್ಮೊಮದ್ದಿನ್

ವಯಸ್ಸು : 65 ವರ್ಷ

ಉದ್ಯೋಗ : ಖಾಸಗಿ ಕೆಲಸ

ವಾಸಸ್ಥಳ : ಶಾಸ್ತ್ರಿ ನಗರ , ಸೇಡಂ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಜಪ್ತಿ ಪಂಚನಾಮೆಯಾಗಿದ್ದು, ಸಾಕ್ಷಿಯು ಅದರಲ್ಲಿರುವ ತನ್ನ ಹೆಬೆಟ್ಟಿನ ಗುರುತುನ್ನು ಗುರುತಿಸಿಕೊಂಡಿರುವುದರಿಂದ ಅದನ್ನು ನಿ ಪಿ 7 ಎಂದು ಗುರುತಿಸಲಾಯಿತು. ಪೋಲೀಸರು ನನಗೆ ಕರೆಯಿಸಿ ಪಂಚನಾಮೆಗೆ ಸಹಿಯನ್ನು ಪಡೆದುಕೊಂಡಿದ್ದರು. ಅದರಲ್ಲಿ ಏನು ಬರೆದಿದ್ದಾರೆ ನನಗೆ ಗೊತ್ತಿಲ್ಲ ಹಾಗೂ ಪೋಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ವಶಕ್ಕೆ ಪಡೆದುಕೊಂಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀಸವಾಲು:** ಮಾನ್ಯ ಸ.ಸ.ಅ ರವರಿಂದ:

ದಿ.26-07-2014 ರಂದು ಮಧ್ಯಾಹ್ನ 02-00 ರಿಂದ 03-00 ಗಂಟೆ ವರೆಗೆ ಸೇಡಂ ಪೋಲೀಸ್ ಠಾಣೆ ಆವರಣದಲ್ಲಿ ನನ್ನ ಹಾಗೂ ಚಾ ಸಾ 15 ರವರ ಸಮಕ್ಷಮ ಒಂದು ನ್ಯಾಯ ಬೆಲೆ ಅಂಗಡಿಯ ದೈನಂದಿನ ವಿತರಣೆ ಪುಸ್ತಕ ಹಾಗೂ ನ್ಯಾಯ ಬೆಲೆ ಅಂಗಡಿಯ ರಶೀದಿ ಪುಸ್ತಕ ಕ್ರಮ ಸಂಖ್ಯೆ 1601 ರಿಂದ 2289 ವರೆಗೆ ಮತ್ತು ನ್ಯಾಯಾ ಬೆಲೆ ಅಂಗಡಿಯ ಹಣ ಕಾರ್ಡು ಪಡೆದು ಪಡಿತರ ಚೀಟಿ ದಾರರಿಗೆ ಆಹಾರ ಪದಾರ್ಥಿ ವಿತರಣೆ ಮಾಡುವ ಪುಸ್ತಕೆ ವಶ ಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಜಪ್ತಿ ಪಂಚನಾಮೆಯಲ್ಲಿ ಭಾಗ ವಹಿಸಿದ್ದರು ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ: ವಕೀಲರು ಪಾಟೀಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**